ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 6 ಸಂ. 6 ಜೂನ್ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ನಾವು ರಾಜಕಾರಣಿಗಳ ಹೆಸರನ್ನು ತೆಗೆದುಕೊಂಡಾಗಲೆಲ್ಲಾ, ಅವರನ್ನು ತಿರಸ್ಕಾರದಿಂದ ನೋಡುತ್ತೇವೆ ಮತ್ತು ಅವರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತೇವೆ. ಈ ಭೂಮಿಯ ಮೇಲೆ ಆಗುವ ಎಲ್ಲ ಕೆಡುಕುಗಳಿಗೆ ಅವರೇ ಹೊಣೆಗಾರರು ಎಂದು ಹೇಳಬೇಕೆಂದು ಅನಿಸಿದರೂ, ಇನ್ನೊಂದು ದೃಷ್ಟಿಕೋನದಿಂದ ಅವರನ್ನು ನಾವು ನೋಡುವುದು ಬಹಳ ಕಷ್ಟವೇನಲ್ಲ. ರಾಜಕಾರಣಿಗಳು ಹಣ ಮತ್ತು ಅಧಿಕಾರಗಳಿಂದ ಭ್ರಷ್ಟಾಚಾರಕ್ಕೆ ಒಳಗಾಗಿರಬಹುದು. ಆದರೆ ಇತರರು ಅವರಿಗಿಂತ ಯಾವ ರೀತಿಯಲ್ಲೂ ಹಿಂದೆ ಉಳಿದಿಲ್ಲ. ಇದು ವಿಷಾದಕರ, ಆದರೆ ಸತ್ಯ.

ನನಗೊಬ್ಬ ಸ್ನೇಹಿತನಿದ್ದ. ಅವನು ಬಹಳ ಒಳ್ಳೆಯ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದ. ಅವನು ಬಡವ ಕೂಡ. ಅವನಿಗೆ ಮುನಿಸಿಪಲ್ ಆಫೀಸಿನಲ್ಲಿ ಕೆಲಸ ಸಿಕ್ಕಿತು. ಅತ್ಯಲ್ಪ ಸಮಯದಲ್ಲೇ ಅವನು ಭ್ರಷ್ಟಾಚಾರಕ್ಕೆ ಮತ್ತು ಅಧಿಕಾರದ ದುರುಪಯೋಗಕ್ಕೆ ಹೆಸರುವಾಸಿಯಾದ. ಅವನಲ್ಲಿದ್ದ ವಿಕೃತ ರೂಪ ನನ್ನತ್ತ ದುರುಗುಟ್ಟಿಕೊಂಡು ನೋಡುವುದನ್ನು ಕಂಡು ನನಗೆ ಷಾಕ್ ಆಯಿತು. ತಿಂಗಳುಗಟ್ಟಲೆ ಕಡತಗಳ ಮೇಲೆ ಉದ್ದೇಶ ಪೂರ್ವಕವಾಗಿ ಕುಳಿತುಕೊಳ್ಳುವ ಬಾಬುಗಳು, ಪೋಲೀಸ್ ಠಾಣೆಗಳಲ್ಲಿ ಮುಗ್ಧ ಜನರನ್ನು ಥಳಿಸುವ ಪೋಲೀಸರು, ಸರ್ಕಾರಿ ಕಛೇರಿಗಳಲ್ಲಿ ಲಂಚಕ್ಕಾಗಿ ತಗಾದೆ ಮಾಡುವ ಸರ್ಕಾರಿ ಅಧಿಕಾರಿಗಳು ಇವರೆಲ್ಲಾ ಮೊದಲು ಸಾಮಾನ್ಯ ಜನರಾಗಿದ್ದು, ಸರಳ ಸಭ್ಯ ಆತ್ಮಗಳಿಂದ ಅಮಾನುಷ ಭ್ರಷ್ಟ ಅಧಿಕಾರಿಗಳಾದವರು. ಹೀಗಿದ್ದಾಗ ರಾಜಕಾರಿಣಿಗಳನ್ನಷ್ಟೇ ಏಕೆ ದೂಷಿಸಬೇಕು! ಅವಕಾಶ ಸಿಕ್ಕರೆ ಸಾಮಾನ್ಯ ನಾಗರಿಕ ಕೂಡಾ ಭ್ರಷ್ಟ ಅಧಿಕಾರಿ ಅಥವಾ ರಾಜಕಾರಣಿ ಆಗುತ್ತಾನೆ.

ನಾನು ಹೇಳುವುದೇನೆಂದರೆ, ಎಲ್ಲಾ ಭ್ರಷ್ಟಾಚಾರ ಮತ್ತು ಸಂತರಂಥ ಜನರು, ಸಾಮಾನ್ಯ ಜನರ ಸಾಗರದಿಂದ ಮೇಲೆ ಬರುತ್ತಾರೆ. ಅವಕಾಶ ಸಿಕ್ಕರೆ ಒಬ್ಬ ವ್ಯಕ್ತಿ ದುಷ್ಟನಾಗಬಹುದು ಅಥವಾ ಸಂತನಾಗಬಹುದು. ನಾವು ಯಾವುದನ್ನಾದರೂ ಆರಿಸಿಕೊಳ್ಳಬಹುದು. ಸರಿಯಾಗಿ ಆಯ್ಕೆ ಮಾಡುವುದು ಅಧ್ಯಾತ್ಮ. ಮತ್ತು ಪ್ರತಿಯೊಬ್ಬರೂ ಸರಿಯಾದ ಆಯ್ಕೆ ಮಾಡಬಹುದು. ನಮಗೆ ಇಚ್ಛಾ ಸ್ವಾತಂತ್ರ್ಯವಿದೆ.

ಒಬ್ಬ ವ್ಯಕ್ತಿ, ಒಂದು ದೊಡ್ಡ ಆಶ್ರಮದ ಗುರು, ಸಪ್ತಋಷಿಗಳು ಅಸ್ತಿತ್ವದಲ್ಲಿ ಇಲ್ಲವೆಂದು ಟೀಕಿಸಿದರು. ನಾನು, "ಒಳ್ಳೆಯದು" ಎನ್ನುತ್ತೇನೆ. ಸಪ್ತಋಷಿಗಳು ಅಸ್ತಿತ್ವದಲ್ಲಿ ಇರುವುದನ್ನು ಯಾರೂ ನಂಬಬೇಕಾಗಿಲ್ಲ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಧ್ಯಾನ ತೆಗೆದುಕೊಳ್ಳಲು, ಋಷಿಗಳ ಇರುವಿಕೆಯನ್ನು ನಂಬಬೇಕೆಂಬ ಪೂರ್ವ ನಿಬಂಧನೆ ಇಲ್ಲ ಎಂಬುದನ್ನು ನಮ್ಮ ಧ್ಯಾನ ತರಗತಿಗಳಿಗೆ ಸೇರುವ ಎಲ್ಲರಿಗೂ ಸ್ಪಷ್ಟವಾಗಿ ಹೇಳುತ್ತೇವೆ. ಆದರೆ ಒಂದು ಮೌಲ್ಯವ್ಯವಸ್ಥೆಯಲ್ಲಿ ನಂಬಿಕೆ ಇರಬೇಕಾದುದು ಅತ್ಯಗತ್ಯ. ಒಳ್ಳೆಯತನ, ಸತ್ಯ ಮತ್ತು ಪ್ರೀತಿಗಳಲ್ಲಿ ನಂಬಿಕೆ ಇಡಿ, ದೇವರಲ್ಲಿ ನಂಬಿಕೆ ಇರಬೇಕಾದ ಅವಶ್ಯಕತೆ ಇಲ್ಲ ಎಂದು ಕೂಡ ನಾನು ಹೇಳಿದ್ದೇನೆ. ನಾವು, ಈ ಮಾರ್ಗದಲ್ಲಿ, ಮೌಲ್ಯ ವ್ಯವಸ್ಥೆಯಲ್ಲಿ ನಂಬಿಕೆ ಇರಬೇಕೆಂಬುದನ್ನೊಂದನ್ನು ಬಿಟ್ಟು ಬೇರೆ ಯಾವುದಕ್ಕೂ ಒತ್ತಾಯಿಸುವುದಿಲ್ಲ.

ನನಗೆ ದೇವರಲ್ಲಿ ನಂಬಿಕೆಯಿದೆ. ನಾನು ಸಪ್ತಋಷಿಗಳ ಇರುವಿಕೆಯನ್ನು ನಂಬುತ್ತೇನೆ. ನನಗೆ ಅವರು ಚೆನ್ನಾಗಿ ಗೊತ್ತು. ನಾನು ಅವರೊಂದಿಗೆ ಸಂಪರ್ಕಿಸುತ್ತೇನೆ. ಹೀಗೆಯೇ ನನ್ನ ಅನೇಕ ವಿದ್ಯಾರ್ಥಿಗಳು ಕೂಡಾ. ಆದರೆ ಯಾರಾದರೂ ಇದನ್ನು ನಂಬದೇ ಹೋದರೆ ಅವರನ್ನು ಒಪ್ಪಿಸುವ ಪ್ರಯತ್ನ ಕೂಡ ಮಾಡುವುದಿಲ್ಲ. ಪ್ರತಿಯೊಬ್ಬರೂ ತಮ್ಮದೇ ಸ್ವಂತ ಅನುಭವದಿಂದ ಅರಿಯಬೇಕು ಮತ್ತು ನಂಬಬೇಕು.

ತರ್ಕಕ್ಕಿಂತ ಅನುಭವ ಹೆಚ್ಚು ಮುಖ್ಯ.

ಎಪ್ಪತ್ತು ವರ್ಷಗಳು. ಈ ಜೀವನ ಸಾಕು ಎನಿಸುತ್ತಿದೆ. ನಾನು ಹೆಚ್ಚು ಕಾಲ ಬದುಕಿದಷ್ಟೂ, ಹೆಚ್ಚು ಒಂಟಿಯಾಗುತ್ತೇನೆ. ಜೀವನ ಸಾಕೆನಿಸುತ್ತಿರುವುದು ಕೆಲಸಕ್ಕಾಗಿ ಅಲ್ಲ, ಏಕೆಂದರೆ ನಾನು ಕೆಲಸವನ್ನು ಪ್ರೀತಿಸುತ್ತೇನೆ. ಸಾಕೆನಿಸುತ್ತಿರುವುದು ಈ ಜೀವನ ನೋಡಿ ಅಲ್ಲ, ಜೀವನ ಸುಂದರ. ಹೀಗೆನಿಸುತ್ತಿರುವುದು ಜನರಿಂದ, ಕೆಲವು ಜನರಿಂದ. ❑

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಿಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

**ಗುರೂಜಿಯವರ ಬ್ಲಾಗ್**
lightdivine.blogspot.com



18 ಮೇ 2009 ರಂದು ಅಂತರ್ ವನವನ್ನು ಉದ್ಘಾಟಿಸಿದಾಗ ಗುರೂಜಿಯವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು.



ಅಂತರ್ ವನ

### ಸುದ್ದಿ-ಸೂಚನೆ

- 18-5-2009 ರಂದು ಗುರೂಜಿಯವರು ಅಂತರ್ ವನವನ್ನು ಉದ್ಘಾಟಿಸಿದರು.
- 17-5-2009 ರಂದು ರಾತ್ರಿ 12 ಘಂಟೆಗೆ ತಪೋನಗರ ನಿವಾಸಿಗಳು ಒಟ್ಟುಗೂಡಿ ಗುರೂಜಿಯವರ 70ನೇ ಹುಟ್ಟುಹಬ್ಬವನ್ನು ಆಚರಿಸಿದರು.
- 24-5-2009 ರಂದು ಗುರೂಜಿಯವರ 70ನೇ ಹುಟ್ಟುಹಬ್ಬವನ್ನು ತಪೋನಗರದಲ್ಲಿ ಆಚರಿಸಲಾಯಿತು. ಐದು ಭಾಷೆಗಳಲ್ಲಿ ಹತ್ತು ಪುಸ್ತಕಗಳನ್ನು ಈ ಸಂದರ್ಭದಲ್ಲಿ ಬಿಡುಗಡೆಮಾಡಲಾಯಿತು.

**ಗುರೂಜಿಯವರ ಭಾನುವಾರಗಳ ಉಪನ್ಯಾಸಗಳ DVD ಗಳು ಮೆಂಬರ್‌ಗಳಿಗೆ ದೊರೆಯುತ್ತವೆ. ವಿವರಳಿಗೆ ಮಾನಸ ಆಫೀಸನ್ನು ಸಂಪರ್ಕಿಸಿ.**

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 12-4-2009 | ಫಣಿ. ಕೆ.ಸಿ. |
| 19-4-2009 | ಸಂದೇಶ್‌ರಾಣೆ |
| 26-4-2009 | ಮುಕುಂದ.ಎಸ್. |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು**
ಶ್ರೀ. ಬ್ರಜಬಂಧು ಮಿಶ್ರ, ಶ್ರೀಮತಿ. ನಿರ್ಮಲ ಬಾಲಕೃಷ್ಣನ್ ಮತ್ತು ಶ್ರೀಮತಿ. ಸುನಂದ ಪ್ರಭುದೇವ್

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 12ವರೆಗೆ<br>ವಿಶೇಷ ಧ್ಯಾನ:<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನೆಲ್: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಮಂಗ | ದಶಪಾಪಹರ ದಶಮಿ |
| 07 | ಭಾನು | ಪೂರ್ಣಿಮಾ |
| 16 | ಮಂಗ | ಕೃಷ್ಣ ಅಷ್ಟಮಿ |
| 21 | ಭಾನು | ಮಾಸ ಶಿವರಾತ್ರಿ |
| 22 | ಸೋಮ | ಅಮಾವಾಸ್ಯೆ |
| 30 | ಮಂಗ | ಶುಕ್ಲಾಷ್ಟಮಿ |

### ಆನೇಕಲ್ ಕೇಂದ್ರದಲ್ಲಿ ಕಾರ್ಯಕ್ರಮ

- 31-5-2009 ರಂದು ಸಪ್ತರ್ಷಿ ಧ್ಯಾನ ಕೇಂದ್ರ, ಆನೇಕಲ್‌ನಲ್ಲಿ ಬೇರೆ ಬೇರೆ ಆಧ್ಯಾತ್ಮಿಕ ಮಾರ್ಗಗಳಲ್ಲಿರುವ ಸಾಧಕರು ಒಂದು ಮಿನಿ ಸಮಾವೇಶಕ್ಕಾಗಿ ಸೇರಿದ್ದರು.
- ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 2ನೇ ಶನಿವಾರ ಮತ್ತು 4ನೇ ಸೋಮವಾರಗಳಂದು ಮೊದಲೇ ಅನುಮತಿ ಪಡೆದುಕೊಂಡ ವಿದ್ಯಾರ್ಥಿಗಳನ್ನು ಮತ್ತು ಇತರರನ್ನು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಘಂಟೆವರೆಗೆ ಭೇಟಿ ಮಾಡುವರು.

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಭಾಗ್ಯವತಿ**

ಏಪ್ರಿಲ್ ತಿಂಗಳ ಬೇಗೆಯು ತಪೋನಗರದ ಸುತ್ತ ಇರುವ ಹೆಚ್ಚಿನಂಶ ನೀರನ್ನು ಒಣಗಿಸಿದೆ. ಆದರೂ ಹೇಗೋ ಗಿಡಮರಗಳು ಉಳಿದು ಕೊಂಡಿವೆ. ತೀಕ್ಷ್ಣವಾದ ಸೂರ್ಯನ ಕಿರಣಗಳು, ದೈವತ್ವದ ತಂಪಿನ ಸೋಂಕಿಲ್ಲದ ಎಲ್ಲವನ್ನೂ ಸುಟ್ಟು ಹಾಕಿದೆಯೇನೋ ಎಂಬಂತಿದೆ.

ತಪೋನಗರದ ಎರಡು ಮನೆಗಳಲ್ಲಿ ಕಳ್ಳತನ ವಾಯಿತು. ಋಷಿಗಳ ವಾಸಸ್ಥಾನವಾದ ಈ ಪ್ರದೇಶದಲ್ಲಿ ಇದು ಹೇಗೆ ಸಾಧ್ಯವಾಯಿತು ಎಂದು ಆಶ್ಚರ್ಯಪಡಬಹುದು. ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾದ್ದೇನೆಂದರೆ– ಋಷಿಗಳು ನಮ್ಮನ್ನು ಸದಾ ರಕ್ಷಿಸುತ್ತಾರೆ ಆದರೆ ಅವರು ಈ ಪ್ರಪಂಚದ ನಿಯಮಗಳನ್ನು ಉಲ್ಲಂಘಿಸುವುದಿಲ್ಲ.

ಏಪ್ರಿಲ್ ತಿಂಗಳಲ್ಲಿ ಓರಿಯಂಟೇಶನ್ ತರಗತಿಗಳು ಜರುಗಿದವು. ರಾಮನವಮಿ ಮತ್ತು ಗುಡ್ ಫ್ರೈಡೇಗಳಂದು ವಿಶೇಷ ಧ್ಯಾನವಿದ್ದಿತು. ಅಂತರ ಮಾನಸದಲ್ಲಿ ಒಂದು ಉದ್ಯಾನವನ ನಿರ್ಮಾಣವಾಗುತ್ತಿದೆ. ❑

## ನನ್ನ ಸಾಧನೆ

**ಶ್ಯಾಮಲಾದೇವಿ**

ನಾನು ಧ್ಯಾನ ಮಾಡುವ ಬಗ್ಗೆ ಎಳ್ಳಷ್ಟೂ ಯೋಚಿಸದಿದ್ದಾಗ, ಯಾವುದೋ ಶಕ್ತಿ ನನ್ನನ್ನು ಧ್ಯಾನಕ್ಕೆ ಕರೆದೊಯ್ಯಿತು. ನಾನು ಆಯ್ದುಕೊಂಡ ಮಾರ್ಗ ಸಾಂಪ್ರದಾಯಿಕವಾಗಿರದೆ, ಪೂರ್ಣ ಸ್ವಾತಂತ್ರ್ಯಕ್ಕೆ ಆದ್ಯತೆ ಇದ್ದುದರಿಂದ, ನಾನು ಈ ಮಾರ್ಗದಲ್ಲಿ ಸಾಧನೆಯನ್ನು ಮುಂದುವರಿಸಿದೆ.

ಬಹಳ ಬೇಗನೆ ನನಗೆ ಪ್ರಾಮುಖ್ಯತೆ, ಮನ್ನಣೆ, ಪ್ರೀತಿ, ಎಲ್ಲಕ್ಕಿಂತ ಮುಖ್ಯವಾಗಿ ಸಹಾಯ ಮತ್ತು ಸರಿಯಾದ ಮಾರ್ಗದರ್ಶನಗಳು ಸಿಕ್ಕಿದವು. ನನ್ನ ಗುರುವಿನಲ್ಲಿ ಆಪದ್ಬಾಂಧವನನ್ನು ಕಂಡೆ. ಅವರು ನನ್ನನ್ನು ಧ್ಯಾನಕ್ಕೆ ಮಾತ್ರವಲ್ಲದೆ ಜೀವನದ ಸತ್ಯಗಳಿಗೆ ಪರಿಚಯಿಸಿದರು. ಗಂಟೆಗಟ್ಟಲೆ ಧ್ಯಾನ ಮಾಡಲು, ಪರವಶತೆಯಿಂದ ಓದಲು, ಜೀವನದ ಆಶ್ಚರ್ಯಕರ ಸತ್ಯಗಳಲ್ಲಿ, ಅವುಗಳ ಸೌಂದರ್ಯ ದಲ್ಲಿ ಲೀನಳಾಗಲು ದಾರಿ ತೋರಿಸಿದರು.

ಅನೇಕ ಸಾರಿ ಸಾಧನೆಯಲ್ಲಿ ಜಾರಿ ಕೆಳಗೆ ಬೀಳುತ್ತಿದ್ದೆ. ಆದರೆ ಪ್ರತಿಸಾರಿಯೂ ನನ್ನ ಗುರು ಆಸರೆ ಕೊಟ್ಟು, ಗುಣಾತ್ಮಕವಾಗಿ ಬೆಳೆಯಲು ಸಹಾಯಮಾಡಿದರು. ನನಗೆ ಸಿಕ್ಕಷ್ಟು ಸಮಯ, ಅವಕಾಶ, ಬೇರಾರಿಗಾದರೂ ಸಿಗುತ್ತದೆಯೇ ಎಂದು ಒಮ್ಮೊಮ್ಮೆ ಆಶ್ಚರ್ಯ ಪಡುತ್ತೇನೆ. ಋಷಿಗಳಿಗೆ ಯಾರೂ ಹೊರತಲ್ಲ! ❑

## ಶಾಂತಿ

**ಜಯಂತ್ ದೇಶ್‌ಪಾಂಡೆ; ಅನು: ಕೆ.ರಾಮಚಂದ್ರ**

ನಾವು ಬಯಸಿದ ವಸ್ತು ಸಿಕ್ಕಾಗ ಸಂತೋಷ ಪಡುತ್ತೇವೆ ಮತ್ತು ಅದು ಸಿಗದಿದ್ದಾಗ ಬೇಸರ ಪಡುತ್ತೇವೆ. ನಮ್ಮ ಬಯಕೆಗಳು ಬದಲಾದಾಗ ಮತ್ತು ಹೆಚ್ಚಾದಾಗ ಅವು ಈಡೇರುತ್ತವೆಯೋ ಅಥವಾ ಇಲ್ಲವೋ ಎನ್ನುವುದನ್ನವಲಂಬಿಸಿ ನಾವು ಸಂತೋಷ ಅಥವಾ ಬೇಸರಪಡುತ್ತೇವೆ. ಈ ರೀತಿ ನಾವು ಸದಾ ಸಂತೋಷದಿಂದಿರಲು ಬಯಸುವುದಾದಲ್ಲಿ, ನಮ್ಮ ಎಲ್ಲ ಬಯಕೆಗಳು ಎಲ್ಲ ಕಾಲದಲ್ಲೂ ಈಡೇರಬೇಕಾಗುತ್ತದೆ. ಹೀಗಾಗುವು ದಿಲ್ಲವಾದ್ದರಿಂದ ನಾವು ಸದಾ ಸಂತೋಷ ದಿಂದಿರಲು ಸಾಧ್ಯವೇ ಇಲ್ಲ.

ನಾವೆಲ್ಲ ಶಾಂತಿ ಮತ್ತು ಸಂತೋಷ ದಿಂದಿರಬೇಕೆಂದು ಬಯಸುತ್ತೇವೆ, ಕಾರಣ ಶಾಂತಿ ನಮ್ಮ ನೈಜ ಸ್ಥಿತಿ. ಹಾಗಾಗಿ ಸಹಜವಾಗಿ ಅದಕ್ಕಾಗಿ ಕಷ್ಟಪಡುತ್ತೇವೆ. ನಮ್ಮ ಬಯಕೆಗಳು ಈಡೇರಿದಾಗ ಸಂತೋಷದಿಂದಿರುತ್ತೇವೆಂದು ತಿಳಿದು ಅದನ್ನು ಹೊಂದಲು ನಾವು ಕಷ್ಟ ಪಡುತ್ತಿರುತ್ತೇವೆ. ಆದರೆ ಇವೆಲ್ಲವನ್ನೂ ಈಡೇರಿಸಿಕೊಂಡಾಕ್ಷಣ ಶಾಂತಿ ಸಿಗುವುದಿಲ್ಲ. ಬಹುಶಃ ತಾತ್ಕಾಲಿಕವಾಗಿ ಸಂತೋಷವನ್ನು ಅನುಭವಿಸುತ್ತೇವೆ ಮತ್ತು ನಮ್ಮ ಹೊಸ ಬಯಕೆಗಳ ಈಡೇರಿಕೆಗಾಗಿ ನಮ್ಮ ಪ್ರಯತ್ನವನ್ನು ಮುಂದುವರಿಸುತ್ತೇವೆ. ನಮ್ಮ ಬಯಕೆಗಳನ್ನು ಈಡೇರಿಸುವ ಸಲುವಾಗಿ ನಾವು ಪ್ರಯತ್ನಿಸಿದಂತೆಲ್ಲ ಮತ್ತು ಸನ್ನಿವೇಶಗಳನ್ನು ಬದಲಾಯಿಸಲು ಯತ್ನಿಸಿದಂತೆಲ್ಲ ಅಂತ್ಯವಿಲ್ಲದ ಈ "ಶಾಂತಿ" ನಮ್ಮ ಜೀವನದಲ್ಲಿ ಮರೀಚಿಕೆ ಯಾಗಿಯೇ ಉಳಿಯುತ್ತದೆ.

ನಿಜವಾದ ಶಾಂತಿಯು ಆಧ್ಯಾತ್ಮಿಕ ಸತ್ಯಗಳನ್ನು ಅರ್ಥಮಾಡಿಕೊಳ್ಳುವುದರಿಂದ ಮಾತ್ರ ಸಿಗುತ್ತದೆ. ಸಾಧನೆಯಲ್ಲಿ ಮುಂದುವರಿದಂತೆ, ನಮ್ಮ ಎಲ್ಲ ಆಸೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತೇವೆ ಹಾಗೂ ಶಾಂತಿ ಎನ್ನುವುದು ಅಂತರಂಗದ ಸ್ಥಿತಿ ಮತ್ತು ಅದನ್ನು ಹೊರಗೆ ಪಡೆಯಲು ಸಾಧ್ಯವಿಲ್ಲ ಎಂದು ತಿಳಿಯುತ್ತೇವೆ. ಹೆಚ್ಚು ಅರ್ಥಮಾಡಿಕೊಳ್ಳುತ್ತ ಹೆಚ್ಚು ಆಂತರಿಕ ಶಕ್ತಿಯನ್ನು ಪಡೆಯುತ್ತ ಕಡೆಯದಾಗಿ ದೇವರ ಇಚ್ಛೆಯನ್ನು ಒಪ್ಪಿ ಕೊಳ್ಳುತ್ತೇವೆ. ಇದೇ ಶರಣಾಗತಿ ಮತ್ತು ಅಂತ್ಯವಿಲ್ಲದ ಶಾಂತಿ ಮತ್ತು ಸಂತೋಷವನ್ನು ಪಡೆಯುವ ದಾರಿ.

ಹೀಗೆಂದಾಕ್ಷಣ ನಮಗೆ ಆಸೆ ಆಕಾಂಕ್ಷೆಗಳು ಇರಲೇಬಾರದು ಎಂದಲ್ಲ ಅಥವಾ ಅವುಗಳನ್ನು ಈಡೇರಿಸಿಕೊಳ್ಳಲು ಅಥವ ಸನ್ನಿವೇಶಗಳನ್ನು ಉತ್ತಮಪಡಿಸಲು ಪ್ರಯತ್ನಪಡಬಾರದು ಎಂದಲ್ಲ. ನಮ್ಮಲ್ಲಿ ಸದಾ ನಮಗಾಗಿ ಮತ್ತು ಇತರರಿಗಾಗಿ ಬಯಕೆಗಳು ಇದ್ದೇಇರುತ್ತವೆ. ನಾವು ನಮ್ಮ ಬಯಕೆ ಗಳೆಡೆಗೆ ಕೆಲಸಮಾಡುತ್ತೇವೆ. ಆದರೆ ಅದರ ಫಲ ವನ್ನು ದೇವರ ಪ್ರಸಾದವೆಂದು ಸ್ವೀಕರಿಸುತ್ತೇವೆ. ❑

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

**(ಸಂಗ್ರಹ: ರಾಘವೇಂದ್ರ ಸೋಮಯಾಜಿ, ಅನು: ಶಿವಪ್ರಕಾಶ್ ಎಲ್.)**

**05.04.2009**

ನಾವು ನಮ್ಮ ಭಾವನೆಗಳು ಮತ್ತು ಅಲೋಚನೆಗಳ ಮೂಲಕ ಬೇರೆಯವರ ಸಂವೇದನೆ ಅಥವಾ ಸನ್ನಿವೇಶ ಅಥವಾ ಜೀವನಕ್ಕೆ ಪ್ರತಿಕ್ರಿಯೆ ನೀಡುತ್ತೇವೆ. ಈ ಮಾನವ ಪ್ರತಿಕ್ರಿಯೆಗಳು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಆಧಾರವಾಗುತ್ತವೆ. ನಾವು ತಕ್ಷಣ ಪ್ರತಿಕ್ರಿಯಿಸಿದರೆ ಪ್ರಗತಿಯನ್ನು ಹೊಂದಬಹುದು ಅಥವಾ ಹೊಂದದೇ ಇರಬಹುದು.

ಆತುರದಲ್ಲಿ ನಾವು ಪ್ರತಿಕ್ರಿಯಿಸುವುದಕ್ಕಿಂತ, ಒಂದು ಕ್ಷಣ ಕಾಯಬೇಕು, ಬೆಳಕಿನ ಬಗ್ಗೆ ಯೋಚಿಸಿ ನಂತರ ಅದರೊಡನೆ ಸಂಪರ್ಕ ಪಡೆಯಬೇಕು. ಆಗ ಬೆಳಕು, 'ಇದು ಒಳ್ಳೆಯ ಅಥವಾ ಕೆಟ್ಟ ಪ್ರತಿಕ್ರಿಯೆ' ಎಂಬುದನ್ನು ತಿಳಿಸುತ್ತದೆ. ಆಗ ನಿಷೇಧಾತ್ಮಕ ಪ್ರತಿಕ್ರಿಯೆಗಳನ್ನು ತಿರಸ್ಕರಿಸಿ ಗುಣಾತ್ಮಕ ಪ್ರತಿಕ್ರಿಯೆಗಳನ್ನು ಆಯ್ಕೆ ಮಾಡಿಕೊಳ್ಳುವುದು ನಮಗೇ ಬಿಟ್ಟ ವಿಷಯ. ಹೀಗೆ ಪ್ರತಿಕ್ರಿಯಿಸುವುದರಿಂದ ಪ್ರಗತಿಯನ್ನು ಪಡೆಯಬಹುದು.

ನಾವು ನಿಷೇಧಾತ್ಮಕ ಸಂವೇದನೆಗಳನ್ನು ತಿರಸ್ಕರಿಸುವುದರಿಂದ ಅವು ಮಾಯವಾಗುತ್ತವೆ. ಆದರೆ ನಾವು ಅವುಗಳನ್ನು ಅದುಮಿಟ್ಟರೆ ನಮ್ಮ ವ್ಯವಸ್ಥೆಯಲ್ಲಿ ಅವು ಉಳಿದು ಬಿಡುತ್ತವೆ.

ಕೆಲವು ಸಲ ಪ್ರತಿಕ್ರಿಯೆ ಇಲ್ಲದಿರುವುದೇ ಅತ್ಯುತ್ತಮ ಪ್ರತಿಕ್ರಿಯೆ. ನಮ್ಮೊಳಗೆ ಬರುವ ಎಲ್ಲ ಅಲೋಚನೆಗಳನ್ನು ನಾವು ವ್ಯಕ್ತಪಡಿಸಬೇಕಾಗಿಲ್ಲ.

* * *

ನಮ್ಮ ವ್ಯವಸ್ಥೆಯಲ್ಲಿ ಅಜ್ಞಾನ ಉಳಿಯದಂತೆ ನೋಡಿಕೊಳ್ಳಬೇಕು, ಏಕೆಂದರೆ ಅದು ಕತ್ತಲೆಯನ್ನು ತರುತ್ತದೆ. ಅಜ್ಞಾನ ಕಪ್ಪು ಚೈತನ್ಯಗಳಿಗೆ ಸಂಪರ್ಕ ಕಲ್ಪಿಸುತ್ತದೆ. ನಾವು ಅಜ್ಞಾನದಿಂದ ಕೂಡಿದ್ದರೆ, ನಾವು ತಪ್ಪು ಆಯ್ಕೆಗಳನ್ನು ಮಾಡುತ್ತೇವೆ. ಇಂಥ ಅಲೋಚನೆಗಳು ಕಪ್ಪು ಚೈತನ್ಯಗಳನ್ನು ಆಕರ್ಷಿಸುತ್ತವೆ.

ನಾವು ಹೊಸಯುಗಕ್ಕೆ ಮತ್ತು ಹೊಸ ಚೈತನ್ಯವಲಯಕ್ಕೆ ಪ್ರವೇಶಿಸುತ್ತಿದ್ದೇವೆ. ಜನರು ಜಗಳವಾಡುತ್ತ, ಹಿಂದಿನ ಕಾಲದಿಂದ ಬಂದಿರುವ ಅರ್ಥವಿಲ್ಲದ ಸಂಪ್ರದಾಯಗಳನ್ನು ಆಚರಿಸುತ್ತಾ ಅಜ್ಞಾನದಲ್ಲಿ ಮುಂದುವರಿಯುತ್ತಿದ್ದರೆ, ಅವರು ಪ್ರಗತಿ ಸಾಧಿಸಲಾಗುವುದಿಲ್ಲ.

ನಾವು ಅಜ್ಞಾನವನ್ನು ಜ್ಞಾನದಿಂದ ಹೋಗಲಾಡಿಸಬಹುದು. ಜ್ಞಾನ ಆತ್ಮವಿಶ್ವಾಸ ಮತ್ತು ದಿಕ್ಸೂಚಿಯನ್ನು ನೀಡುತ್ತದೆ. ನಾವು ಪುಸ್ತಕಗಳನ್ನು ಓದುವುದರಿಂದ ಮತ್ತು ಧ್ಯಾನ ಮಾಡುವುದರಿಂದ ಜ್ಞಾನವನ್ನು ಗಳಿಸಬಹುದು. ನಾವು ಧ್ಯಾನ ಮಾಡಿದಾಗ, ಜ್ಞಾನಸಾಗರಕ್ಕೆ ಸಂಪರ್ಕ ಪಡೆಯುತ್ತೇವೆ. ಜ್ಞಾನವೇ ಬೆಳಕು. ಬೆಳಕು ಎಲ್ಲಿದೆಯೋ ಅಲ್ಲಿ ಕತ್ತಲೆ ಇರಲು ಸಾಧ್ಯವಿಲ್ಲ.

**12.04.2009**

ನಾವು ಮೌಲ್ಯ ವ್ಯವಸ್ಥೆಯ ಬಗ್ಗೆ ಮಾತನಾಡುತ್ತೇವೆ. ಮೌಲ್ಯ ವ್ಯವಸ್ಥೆಯನ್ನು ಪ್ರತಿ ವ್ಯಕ್ತಿಗೆ ಅನ್ವಯಿಸುವಂತೆ ಗುಂಪುಗಳಿಗೆ, ಸಂಸ್ಥೆಗಳಿಗೆ, ರಾಷ್ಟ್ರಗಳಿಗೆ, ಪ್ರಪಂಚಕ್ಕೆ, ವಿಶ್ವಗಳಿಗೆ ಮತ್ತು ಪ್ರಕೃತಿಗೂ ಅನ್ವಯಿಸಬಹುದು. ಆದ್ದರಿಂದಲೇ ಇದನ್ನು ವಿಶ್ವಮೌಲ್ಯವ್ಯವಸ್ಥೆ ಎಂದು ಕರೆಯಬಹುದು. ಈ ಮೌಲ್ಯವ್ಯವಸ್ಥೆ ಸತ್ಯ, ಅಹಿಂಸೆ, ಕರುಣೆ ಇತ್ಯಾದಿ ಅಂಶಗಳನ್ನು ಒಳಗೊಂಡಿದೆ. ಈ ಮೌಲ್ಯವ್ಯವಸ್ಥೆಯನ್ನು ಅನುಸರಿಸದೇ ಇರುವವರು ಕಪ್ಪು ಜನರು.

ನಾವು ಯಾವಾಗಲೂ ಪರಸ್ಪರ ಸಂಪರ್ಕ ಹೊಂದಿದ್ದೇವೆ. ಪ್ರತಿ ಮಾನವ ಜೀವಿ ಪ್ರಜ್ಞೆಯ ಹಂತದಲ್ಲಿ ಅಂತರ ಸಂಪರ್ಕ ಹೊಂದಿರುತ್ತದೆ. ನಾವು ಈ ಭೂಮಿ, ಸೂರ್ಯಮಂಡಲ, ಗ್ಯಾಲಾಕ್ಸಿಗಳು, ಪ್ರಕೃತಿ ಮತ್ತು ಇಡೀ ಸೃಷ್ಟಿಯೊಂದಿಗೆ ಸಂಪರ್ಕ ಪಡೆದಿದ್ದೇವೆ. ಆದ್ದರಿಂದ ಎಲ್ಲಾದರೂ ಏನಾದರೂ ಸಂಭವಿಸಿದರೆ ವ್ಯಕ್ತಿಯ ಮೇಲೆ ಪರಿಣಾಮ ಉಂಟಾಗುತ್ತದೆ. ಉದಾಹರಣೆಗೆ ಇದ್ದಕ್ಕಿದ್ದಂತೆ ಹೊಸ ಕಾಯಿಲೆಗಳು ಕಾಣಿಸಿಕೊಂಡವು. ಇವು ಆಫ್ರಿಕಾದಲ್ಲಿ ಎಲ್ಲಿಯೊ ನಡೆದ ಅನ್ಯಾಯದ ಫಲಿತಾಂಶ.

ಒಬ್ಬ ವ್ಯಕ್ತಿಯ ಜೀವನದಲ್ಲಿ ಎಲ್ಲವೂ ಚೆನ್ನಾಗಿದ್ದಾಗ, ಇದ್ದಕ್ಕಿದ್ದಂತೆ ಶಾಂತಿಭಂಗ ತಲೆದೋರುತ್ತದೆ. ಯಾವ ಕಾರಣವೂ ಇಲ್ಲದೆ ಧ್ಯಾನ ಮಾಡಲು ಕಷ್ಟವಾಗುತ್ತದೆ. ಎಲ್ಲೋ ಆಗುವ ಭಯೋತ್ಪಾದಕರ ಧಾಳಿ ಕಾರಣವಾಗಿರಬಹುದು. ಈ ಸೃಷ್ಟಿಯಲ್ಲಿ ಏನೇ ಸಂಭವಿಸಿದರೂ ಅದು ನಮ್ಮ ಮೇಲೆ ಪರಿಣಾಮ ಬೀರುತ್ತದೆ. ನಿಜವಾಗಿಯೂ ಇದನ್ನು ಅರ್ಥಮಾಡಿಕೊಂಡು, ಒಪ್ಪಿಕೊಳ್ಳಲು ನಾವು ಏಕಾಂಗಿಯಾಗಿ ಕುಳಿತು ಗಾಢವಾಗಿ ಚಿಂತನೆ ಮಾಡಬೇಕು.

ಇದೇ ರೀತಿ ನಾವು ಏನು ಮಾಡಿದರೂ ಹೊರಗಿನ ಪ್ರಪಂಚದ ಮೇಲೆ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ನಾವು ಸರಿಯಾಗಿ ಜೀವಿಸುತ್ತ, ಶಾಂತಿ ಮತ್ತು ಪ್ರೀತಿಗಳನ್ನು ಮಾತ್ರ ಕಂಪಿಸುವುದು ಅತ್ಯಂತ ಮುಖ್ಯ. ಒಳ್ಳೆಯ ವ್ಯಕ್ತಿಯಾಗಿರುವುದು ನಮ್ಮ ಮೇಲಿನ ಬಹಳ ದೊಡ್ಡ ಜವಾಬ್ದಾರಿ. ನಾವು ಒಳ್ಳೆಯಯವರು ಮತ್ತು ಪ್ರಾಮಾಣಿಕರಾಗಿರುವುದರಿಂದ ಇಡೀ ಸೃಷ್ಟಿಯ ಮೇಲೆ ಪ್ರಭಾವ ಉಂಟು ಮಾಡುತ್ತೇವೆ.

ನಾವು ನಮ್ಮ ಜಾಗೃತಿಯನ್ನು ನಮ್ಮ ಸ್ವಂತ ಜೀವನಕ್ಕೆ ಮಾತ್ರ ಸೀಮಿತ ಪಡಿಸಿಕೊಂಡಿದ್ದೇವೆ. ಒಬ್ಬ ವ್ಯಕ್ತಿಯ ಉದ್ಧಾರದ ಬಗ್ಗೆ ಅಥವಾ ನಮ್ಮ ಜೀವನಕ್ಕಿಂತ ಮಿಗಿಲಾದವುಗಳ ಬಗ್ಗೆ ನಾವು ಯಾವುದೇ ರೀತಿ ಆಸಕ್ತಿ ತೋರುವುದಿಲ್ಲ. ನಮ್ಮ ಜಾಗೃತಿಯನ್ನು ವಿಸ್ತರಿಸಿದರೆ, ಇಂಥ ವಿಷಯಗಳನ್ನು ನಾವು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.

**26.04.2009**

ಕೆಲವು ವಾಸ್ತವಾಂಶಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಒಪ್ಪಿಕೊಳ್ಳಲು ಸಮಯ ಕೂಡಿಬಂದಿದೆ. ಈ ವಾಸ್ತವಗಳನ್ನು ಒಪ್ಪಿಕೊಂಡು ನಾವು ಜಾಗೃತರಾಗಿ, ಅದರಂತೆ ನಡೆಯಬೇಕಾಗಿದೆ.

ನಾವು ಹೊಸಯುಗಕ್ಕೆ ಪ್ರವೇಶಿಸುತ್ತಿರುವುದು ಒಂದು ವಾಸ್ತವತೆ. ಇದರರ್ಥ, ಹೊಸಯುಗದ ತತ್ವಗಳನ್ನು ಮತ್ತು ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡು ಅಳವಡಿಸಿಕೊಂಡು ಬಾಳಬೇಕು. ಇಷ್ಟು ವರ್ಷಗಳು ಅಭ್ಯಾಸ ಮಾಡಿಕೊಂಡು ಬಂದ ಕಂದಾಚಾರಗಳನ್ನು ಕಿತ್ತೆಸೆಯಬೇಕು. ಆದ್ದರಿಂದ ನಮಗೆ ಆಯ್ಕೆ ಮಾಡಿಕೊಳ್ಳುವ ಅವಕಾಶವಿಲ್ಲ. ಸಿದ್ಧತೆ ಮಾಡಿಕೊಳ್ಳಲು ಸ್ವಲ್ಪ ಸಮಯ ಮಾತ್ರ ಉಳಿದಿದೆ.

ನಾನು ನನ್ನ ಗುರುವನ್ನು ಭೇಟಿಯಾದಾಗ, ಅವರು ಹೇಳಿದ್ದರು: ನಾವು ಹೊಸಯುಗಕ್ಕೆ ಪ್ರವೇಶಿಸುತ್ತಿದ್ದೇವೆ; 1974ರಲ್ಲಿ ಕಲಿಯುಗ ಮುಗಿದಿದೆ ಅಲ್ಲಿಂದ 432 ವರ್ಷಗಳು ಪರಿವರ್ತನೆಯ ಕಾಲ. ಈ ಪರಿವರ್ತನೆಯ ಕಾಲದಲ್ಲಿ ಪರಿಷ್ಕಾರವಿರುವುದರಿಂದ, ಕಾಲ ಅತ್ಯಂತ ವೇಗವಾಗಿ ಓಡುತ್ತಿದೆ. ಉಳಿದಿರುವ 397 ವರ್ಷಗಳು ಮೂರು ವರ್ಷಗಳಿಗೆ ಕುಗ್ಗಿಸಿರುವುದರಿಂದ ಅತ್ಯಂತ ಮಹತ್ವದ ಬದಲಾವಣೆಗಳು ಮತ್ತು ಕುಸಿತಗಳನ್ನು ನಿರೀಕ್ಷಿಸಲಾಗಿದೆ.

2012ನೇ ವರ್ಷಕ್ಕೆ ಮೊದಲು ನಾವು ಸಿದ್ಧರಾಗಬೇಕು. ಸಭ್ಯ ಮತ್ತು ಒಳ್ಳೆಯ ಮಾನವ ಜೀವಿಗಳಾಗುವುದಕ್ಕೆ ಹೆಚ್ಚಿನ ಕಾಲಾವಧಿ ಬೇಕಾಗಿಲ್ಲ. ಹೀಗೆ ಬಾಳಲು ಪ್ರಾರಂಭಿಸುವುದಕ್ಕೆ ಕೇವಲ ನಮ್ಮ ಸಂಕಲ್ಪ, ನಮ್ಮ ನಿರ್ಧಾರದ ಆಗತ್ಯವಿದೆ. ಮೂರು ವರ್ಷಗಳ ಪರಿವರ್ತನೆಯ ಕಾಲ ನಿಜವಾಗಿಯೂ ಒಂದು ವಾಸ್ತವತೆ.

ಈಗಿನ ಕಾಲ ಒಂದು ರೀತಿಯಲ್ಲಿ ವಾಪಸು ಹಿಂತಿರುಗಿಸಿ ಕೊಡುವ ಸಮಯ. ವಿಶ್ವ ಹಿಂತಿರುಗಿ ಕೊಡಲು ಸಿದ್ಧವಾಗಿದೆ. ಅದು ನಮ್ಮಿಂದ ಪಡೆದುದನ್ನು ಹಿಂತಿರುಗಿಸುತ್ತದೆ. ನಾವು ಆನಂದವನ್ನು ಕಳುಹಿಸುತ್ತಿದ್ದರೆ, ವಿಶ್ವವು ಆನಂದವನ್ನು ಹೆಚ್ಚಿನ ಪ್ರಮಾಣದಲ್ಲಿ ಕಳುಹಿಸುತ್ತದೆ. ನಮ್ಮ ಗುಣಾತ್ಮಕ ಹಾಗೂ ನಿಷೇಧಾತ್ಮಕ ಭಾವೋದ್ವೇಗಗಳು ವಿಶ್ವವನ್ನು ತಲುಪುತ್ತವೆ.

ನಾವು ಕೊಟ್ಟದ್ದನ್ನು ಹಿಂತಿರುಗಿಸಿ ಕೊಡುವುದು ವಿಶ್ವದ ಕರ್ತವ್ಯ. ಇದು ಶಿಕ್ಷೆಯಲ್ಲ. ನಮ್ಮ ತಪ್ಪುಗಳನ್ನು ಅರಿಯಲು ಮತ್ತು ತಿದ್ದಿಕೊಳ್ಳಲು ಇದು ಸದವಕಾಶ. ಇದು ದಿಢೀರನೆ ಕ್ಷಮಿಸುವ ಕಾಲ. ನಾವು ಪ್ರಾಮಾಣಿಕವಾಗಿ ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಟ್ಟರೆ ನಮ್ಮನ್ನು ಕ್ಷಮಿಸಲಾಗುವುದು. ಆಗ ಯಾವುದೇ ಕರ್ಮಗಳು, ಸಮಸ್ಯೆಗಳು ಅಥವಾ ನರಳಾಟಗಳು ಇರುವುದಿಲ್ಲ. ❑

## ಭಾನುವಾರದ ಉಪನ್ಯಾಸಗಳು

**5.04.2009**

ನಮ್ಮ ಪಾಲಿಗೆ ಗುರೂಜಿಯವರು ಎಲ್ಲ ಬಗೆಯ ಒಳ್ಳೆಯ ಸಂಗತಿಗಳಿಗೆ ಒಂದು ಬಾಗಿಲಿದ್ದಂತೆ. ಅವರ ಹುಟ್ಟುಹಬ್ಬ ನಮಗೆಲ್ಲ ವಿಶೇಷವಾದ ದಿನ. ಸಾಮಾನ್ಯವಾಗಿ 7 ಮತ್ತು ಅದಕ್ಕೆ ಸಂಬಂಧಿಸಿದ ಸಂಖ್ಯೆಗಳನ್ನು ಶುಭವೆಂದು ಪರಿಗಣಿಸಲಾಗುತ್ತದೆ. ಈ ವರ್ಷ ಗುರೂಜಿಯವರು 70 ವರ್ಷಗಳನ್ನು ಪೂರೈಸುತ್ತಿರುವುದು ಅದನ್ನು ಮತ್ತಷ್ಟು ವಿಶೇಷಗೊಳಿಸುತ್ತದೆ. ಇದರ ಸಕಾರಾತ್ಮಕ ಪರಿಣಾಮ ನಮ್ಮೆಲ್ಲರನ್ನೂ ತಟ್ಟಲಿದೆಯೆಂದು ನನಗನ್ನಿಸುತ್ತದೆ. ಅನೇಕ ಬಾರಿ ಈ ಪರಿಣಾಮಗಳು ಆ ಸಂದರ್ಭಕ್ಕಿಂತ ಮೊದಲೇ ಆರಂಭವಾಗಿ ಅನಂತರವೂ ಮುಂದುವರೆಯುತ್ತವೆ.

ಗುರೂಜಿಯವರ 70ನೆಯ ಜನ್ಮದಿನ ಬರುವ ಮೊದಲೇ ನಮ್ಮೆಲ್ಲರಲ್ಲಿ ಕೆಲವು ಉತ್ತಮ ಬದಲಾವಣೆಗಳಾಗಿರುವುದನ್ನು ನಾನು ಗಮನಿಸಿದ್ದೇನೆ. ನಮಗೆ, ಅವರ ಕೆಲಸವೇ ನಮ್ಮ ಕೆಲಸ. ಜನರು ಈಗ ಕೆಲಸದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಲೈಟ್ ಚಾನೆಲಿಂಗ್ ಸಮಾರಂಭ ಅಂಥದೊಂದು ವೇದಿಕೆಯಾಗಿ, ಬಹಳಷ್ಟು ಜನರು ಈ ಸಮಾರಂಭಕ್ಕಾಗಿ ಕೆಲಸಮಾಡಲು ಮುಂದೆ ಬಂದಿದ್ದರು. ಕೆಲಸದೆಡೆಗೆ, ಗುರುವಿನೆಡೆಗೆ ಮತ್ತು ಬೆಳಕಿನೆಡೆಗಿನ ಅವರ ಪ್ರೀತಿ ನಿಚ್ಚಳವಾಗಿ ಗೋಚರಿಸುತ್ತಿತ್ತು. ನಮ್ಮ ಪ್ರೀತಿಯನ್ನು ಕ್ರಿಯೆಗಳಲ್ಲಿ ವ್ಯಕ್ತಪಡಿಸುವುದು ಅತ್ಯಂತ ಮುಖ್ಯವಾದದ್ದೆಂದು ನನಗನ್ನಿಸುತ್ತದೆ.

ನಾವೆಲ್ಲ ವಿಭಿನ್ನ ವ್ಯಕ್ತಿಗಳು. ಇನ್ನೊಬ್ಬರನ್ನು ಅನುಕರಿಸದೆ ನಮ್ಮ ವೈಯಕ್ತಿಕತೆ, ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳುವ ಅಗತ್ಯವಿದೆ. ನಮ್ಮದೇ ದಾರಿಯನ್ನು ನಾವು ಕಂಡುಕೊಳ್ಳಬೇಕಿದೆ.

–ಎಲ್. ಸುಧಾಕರ್

**12.04.2009**

ಹುಟ್ಟಿನಿಂದ ಸಾವಿನವರೆಗೆ ಮನುಷ್ಯ ಜ್ಞಾನದ ಹುಡುಕಾಟದಲ್ಲಿರುತ್ತಾನೆ. ಗಳಿಸುವುದು, ಬೆಳೆಯುವುದು, ಹೆಚ್ಚು ತಿಳಿದುಕೊಳ್ಳುವುದು, ತನ್ನನ್ನು ತಾನು ಉತ್ತಮಪಡಿಸಿಕೊಳ್ಳುವುದು, ಸೃಜನಾತ್ಮಕತೆ ಇವು ಅವನ ಸಹಜ ಗುಣ. ಜ್ಞಾನದ ಹುಡುಕಾಟದಲ್ಲಿ ಅವನಿಗೆ ದ್ವಂದ್ವಗಳು ಎದುರಾಗಬಹುದು. ಹಳೆಯ ಮತ್ತು ಹೊಸ ಸಂಗತಿಗಳು ಪರಸ್ಪರ ಮುಖಾಮುಖಿಯಾಗಬಹುದು. ಅಂಥ ಘರ್ಷಣೆಯ ಸಮಯದಲ್ಲಿ ನಾವು ವಿಚಲಿತರಾಗಬಾರದು. ಹಳೆಯ ವಿಚಾರಗಳು ನಮ್ಮಲ್ಲಿ ಆಳವಾಗಿ ಬೇರೂರಿದ್ದರೆ ನಾವು ಗೊಂದಲಗೊಳ್ಳುತ್ತೇವೆ. ನನಗನ್ನಿಸುವಂತೆ ಜ್ಞಾನ ಕ್ರಿಯಾಶೀಲ ಆಗಿರುವಂಥದ್ದು. ಆದ್ದರಿಂದ ಹೊಸ ಸಂಗತಿಗಳಿಗೆ ನಮ್ಮ ಮನಸ್ಸನ್ನು ತೆರೆದಿಡುವುದು ಮುಖ್ಯವಾದದ್ದು.

ನಾವು ಒಂದು ತತ್ವವನ್ನು ಅರ್ಥಮಾಡಿಕೊಂಡು ಅದನ್ನು ಅನುಸರಿಸುತ್ತಿರುವಂತೆ ನಟಿಸಬಹುದು. ಸತ್ಯವನ್ನು ಬಾಯಿಮಾತಿನಲ್ಲಿ ಹೇಳಬಹುದಾದರೂ ಅದು ಕೇವಲ ಹೊರನೋಟಕ್ಕಷ್ಟೇ ಸೀಮಿತವಾಗಿದ್ದು, ನಮ್ಮ ಅಂತರಾಳದ ಧ್ವನಿಯಾಗಿ ಹೊಮ್ಮುವುದಿಲ್ಲ. ನಮ್ಮ ಮಾತುಗಳು ಒಳಗಿನ ಅನುಭವದಿಂದ ಬರಬೇಕು. ಆಗ ಮಾತ್ರ ಅದಕ್ಕೆ ಮೌಲ್ಯವಿರುತ್ತದೆ. ಇಲ್ಲದಿದ್ದರೆ ಅದು ಮಾತುಕತೆಯ ಮಟ್ಟದಲ್ಲೇ ಉಳಿಯುತ್ತದೆ. ಕೀರ್ತಿ ಮತ್ತು ಅದರೊಂದಿಗೆ ಬರುವ ಎಲ್ಲ ಸಂಗತಿಗಳೂ ನಮ್ಮ ಸಾಧನೆಯಲ್ಲಿ ಅಪಾಯಕಾರಿ ತೊಡಕುಗಳಾಗಿ ಎದುರಾಗುತ್ತವೆ. ಕೀರ್ತಿಯು ಅದನ್ನು ಮೀರಿ ಬೆಳೆಯುವ ಸಾಧನವಾಗಬಹುದು ಅಥವಾ ಒಂದು ಪರೀಕ್ಷೆಯಾಗಿರಬಹುದು.

ನಾವು ಜನ್ಮತಳೆಯುವಾಗ ಒಂದು ಉದ್ದೇಶದೊಂದಿಗೆ ಬರುತ್ತೇವೆ, ಮತ್ತು ನಮ್ಮ ಬದುಕು ಇದಕ್ಕನುಗುಣವಾಗಿ ನಡೆಯುತ್ತದೆ. ಇದನ್ನು ನಾವು ಬದಲಿಸಲಾರೆವು. ಆದರೆ ನಮ್ಮ ಸಾಮರ್ಥ್ಯವಿರುವುದು ಒಂದು ಘಟನೆಯೆಡೆಗಿನ ನಮ್ಮ ಪ್ರತಿಕ್ರಿಯೆಯಲ್ಲಿ. ಮಹಾತ್ಮರು ರೂಪುಗೊಳ್ಳುವುದು ಈ ರೀತಿಯಲ್ಲಿಯೇ. ಒಬ್ಬ ವ್ಯಕ್ತಿಯನ್ನು ಶಿಲುಬೆಗೇರಿಸಿದಾಗ ಅವರು, 'ದೇವರೇ, ಇವರನ್ನು ಕ್ಷಮಿಸು,' ಎಂದರೆ ಉಳಿದವರು ಶಾಪ ಹಾಕುತ್ತ ನರಳುತ್ತಿದ್ದರು. ನಾವೂ ಮಹಾತ್ಮರಾಗುವುದು ಹೇಗೆ ಮತ್ತು ಎಂದು? ಅದು ಸಾಧ್ಯವಾಗುವುದು ಈಗ.

–ಕರಣ್ ಕುಲಕರ್ಣಿ

**19.04.2009**

ನಮ್ಮೆಲ್ಲರ ಬದುಕಿನಲ್ಲೂ ಪವಾಡಗಳು ನಿಶ್ಶಬ್ದವಾಗಿ ನಡೆಯುತ್ತಿರುತ್ತವೆ. ಈ ಮಾರ್ಗದಲ್ಲಿ ನಾವು ನಿಜಕ್ಕೂ ಅಪರೂಪದ ಪ್ರಯೋಜನಗಳನ್ನು ಪಡೆಯುತ್ತೇವೆ. ಗುರೂಜಿಯವರು ಇತ್ತೀಚೆಗೆ 'ನಾವೆಷ್ಟು ಪ್ರಯತ್ನ ಪಡುತ್ತೇವೆಯೋ ಅಷ್ಟು ಯಶಸ್ಸನ್ನು ಪಡೆಯುತ್ತೇವೆ,' ಎಂದು ಹೇಳಿರುವುದು ನಮ್ಮನ್ನು ಜಾಗೃತಗೊಳಿಸಿ, ಸಾಧನೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿದೆ. ಸಂಪೂರ್ಣ ಶರಣಾಗತಿಯಲ್ಲಿ ನಾವು ಆ ಭಗವಂತನ ಸಾಧನಗಳಾಗಿ ಬದಲಾಗುತ್ತೇವೆ. ಜೊತೆಗೆ ನಾವೊಂದು ಮೌಲ್ಯವ್ಯವಸ್ಥೆಯನ್ನು ಅನುಸರಿಸಬೇಕು. ಪ್ರೀತಿ ನಮ್ಮ ಬದುಕಿನ ಉಸಿರಾಗಬೇಕು. ಜನರು, ಪ್ರಕೃತಿ, ಬದುಕು, ದೇವರು ಎಲ್ಲರೆಡೆಗೆ ಪ್ರೀತಿಯನ್ನು ವ್ಯಕ್ತಪಡಿಸಿದಾಗ ಎಲ್ಲ ಘರ್ಷಣೆಗಳೂ ಮಾಯವಾಗಿ, ನಾವು ನೆಮ್ಮದಿಯನ್ನು ಕಾಣುತ್ತೇವೆ.

ಇಡೀ ಸೃಷ್ಟಿ ದೈವಿಕತೆಯಿಂದ ತುಂಬಿದೆ. ಈ ದೈವಿಕತೆಯ ಅರಿವಿನಲ್ಲಿ ನಾವು ಜೀವಿಸಬೇಕು. ಅದು ತಂದುಕೊಡುವ ಆನಂದವನ್ನು ಅನುಭವಿಸಬೇಕು. ನಮ್ಮಲ್ಲಿ ಪ್ರೀತಿಯಿದ್ದಾಗ ಕೃತಜ್ಞತೆ ಮತ್ತು ದೈವಿಕತೆಗಳು ಸಹಜಗುಣಗಳಾಗುತ್ತವೆ. ದೇವರಿಂದ ನಾವು ಪಡೆದಿರುವ ಕಾಣಿಕೆಗಳಿಗೆ ಕೊನೆಮೊದಲಿಲ್ಲ ಎನ್ನುವ ಅರಿವು ನಮ್ಮಲ್ಲಿರಬೇಕು. ಈ ಕೃತಜ್ಞತೆಯ ಜ್ವಾಲೆ ನಮ್ಮದೆಯಲ್ಲಿ ನಿರಂತರವಾಗಿ ಬೆಳಗುವಾಗ ಅಲ್ಲಿ ಅಹಂ ಉಳಿಯುವುದಿಲ್ಲ. ಬೆಳಕನ್ನು ಆರಿಸಿಕೊಂಡು, ನಮ್ಮ ಗುರಿಯನ್ನು ಸಾಧಿಸಲು ಪ್ರಯತ್ನಿಸಬೇಕು. ಬೆಳಕಾಗಿ ಬದಲಾಗುವುದೇ ನಮ್ಮ ಗುರಿ. ನಮ್ಮೊಳಗೆ ಬೆಳಕಿಲ್ಲದಿದ್ದರೆ ಅದನ್ನು ಸುತ್ತಲೂ ಹರಡಲಾರೆವು.

–ಅಂಜಲಿ ಪಾಟಿಲ್

**26.04.2009**

ನಾವು ಈ ಸೃಷ್ಟಿಯ ಅಂಶಗಳು. ಇದರ ಭಾಗವಾಗಿ ಬದುಕಬೇಕೋ ಅಥವಾ ಬೇರೆಯಾಗಿ ಉಳಿಯಬೇಕೋ ಎನ್ನುವ ಆಯ್ಕೆ ನಮಗೆ ಬಿಟ್ಟದ್ದು. ಇದರ ಭಾಗವಾಗಿ ಬದುಕುವುದೆಂದರೆ ಒಂದು ಪೂರ್ಣತೆಯ ಅಂಶಗಳಾಗಿ ನಮ್ಮನ್ನೇ ಗುರುತಿಸಿಕೊಳ್ಳುವುದು. ಸುತ್ತಲಿನ ಜನರೊಂದಿಗೆ, ಪರಿಸರದೊಂದಿಗೆ, ಪ್ರಕೃತಿಯೊಂದಿಗೆ ಏಕತೆಯಿಂದ ಜೀವಿಸುವುದು. ಆಗ ದಿವ್ಯಪ್ರೇಮ ನಮ್ಮ ಬದುಕಿನ ಮುಖ್ಯ ಅನುಭವವಾಗಿರುತ್ತದೆ. ಜನರು, ಪ್ರಕೃತಿ ಮತ್ತು ಬದುಕಿನೊಂದಿಗೆ ನಾವು ಪ್ರೀತಿ–ಕರುಣೆಗಳಿಂದ ವ್ಯವಹರಿಸುತ್ತೇವೆ.

ಹೀಗಲ್ಲದೆ ಬೇರೆಯಾಗಿ ಬದುಕುವಾಗ ನಾವು ಸ್ವಾರ್ಥಿಗಳಾಗಿ, ಕೇವಲ ನಮಗೋಸ್ಕರವೇ ಜೀವಿಸುತ್ತೇವೆ. ನಮ್ಮ ಆಲೋಚನೆ–ಭಾವನೆಗಳೆಲ್ಲ ನಮ್ಮ ಮತ್ತು ನಮ್ಮ ಕುಟುಂಬಕ್ಕಷ್ಟೇ ಸೀಮಿತವಾಗಿರುತ್ತವೆ. ಆಗ ನಮ್ಮ ಬದುಕಿನ ಮುಖ್ಯ ಅನುಭವ ಪ್ರೀತಿಯಾಗಿರದೆ, ಭಯವಾಗಿರುತ್ತದೆ. ಪ್ರೀತಿ–ಏಕತೆಗಳನ್ನೆಂದೂ ವ್ಯಕ್ತಪಡಿಸದೆ, ಇನ್ನಷ್ಟು–ಮತ್ತಷ್ಟು ಎಂದು ಹಾತೊರೆಯುತ್ತ, ಯಾವುದೋ ಅಭದ್ರತೆಯಲ್ಲಿ ಸದಾ ಬದುಕು ಸಾಗಿಸುತ್ತೇವೆ. ನಾವು ಏಕತೆಯಲ್ಲಿ, ಇಡೀ ವಿಶ್ವದ ಪ್ರೇಮವನ್ನು ಅನುಭವಿಸುವಾಗ ನಮ್ಮನ್ನು ಅಥವಾ ನಮ್ಮ ಆಚೆಯ ಏನನ್ನೂ ಪ್ರತ್ಯೇಕವೆಂದು ಭಾವಿಸುವುದಿಲ್ಲ. ಈ ಅನುಭಾವದಲ್ಲಿ ಬದುಕಿನ ಹತ್ತು–ಹಲವು ಪ್ರಕಟಣೆಗಳೊಂದಿಗೆ ನಮ್ಮನ್ನು ಬೆಸೆಯುವ ಒಂದೇ ತತ್ವವನ್ನು ನಾವು ಅನುಭವಿಸುತ್ತೇವೆ.

ಪ್ರಕೃತಿ ಸದಾಕಾಲ ಪ್ರೀತಿಯನ್ನು ಹೊರಹೊಮ್ಮಿಸುತ್ತದೆ. ಎಲ್ಲಕ್ಕೂ ಹೊಂದಿಕೊಂಡು ಹೋಗುವ ಗುಣವುಳ್ಳ ಪ್ರಕೃತಿಯು ನಮ್ಮನ್ನು ಹೀಲ್ ಮಾಡಬಲ್ಲದು. ಅದರೊಂದಿಗೆ ಮಾನಸಿಕವಾಗಿ ಸಮ್ಮಿಲನಗೊಳ್ಳುವುದು ನಿಜಕ್ಕೂ ಒಂದು ಉನ್ನತ ಅನುಭವವಾಗಬಲ್ಲದು. ಪ್ರಕೃತಿಯು ದೇವರಿಗೆ ಸಂಪೂರ್ಣವಾಗಿ ಶೃತಿಗೊಂಡಿದೆ. ಅದರೊಂದಿಗೆ ಗುರುತಿಸಿಕೊಳ್ಳಲು ಪ್ರಯತ್ನಿಸಿದಾಗ ನಾವು ಹಲವಾರು ಆಧ್ಯಾತ್ಮಿಕ ಸತ್ಯಗಳನ್ನು ನೇರವಾಗಿ ಗ್ರಹಿಸಬಹುದು. ಪ್ರಕೃತಿಯೊಂದಿಗೆ ಒಡನಾಡುವುದೆಂದರೆ ದೇವರೊಂದಿಗೆ ಒಡನಾಡಿದಂತೆ. 'ಪ್ರಕೃತಿಯೇ ದೇವರು' ಎನ್ನುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

–ಕಾರ್ತಿಕ್ ಸಿ.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ಶಿವಪ್ರಕಾಶ್**

ಮುಂಬೈನಲ್ಲಿ ನೀವು ಸಭಾಂಗಣವನ್ನು ಪ್ರವೇಶಿಸಿ ವೇದಿಕೆಯ ಬಳಿ ಬಂದಾಗ, ನಿಮಗೆ ಗೌರವ ಸಲ್ಲಿಸಲು ನನ್ನ ಕಣ್ಣುಗಳನ್ನು ಮುಚ್ಚಿದೆ. ಆಗ ನಿಮ್ಮ ಜೊತೆಯಲ್ಲಿ ಏಳು ನಕ್ಷತ್ರಗಳನ್ನು ನೋಡಿದೆ. ಭಾಷಣ ಮಾಡುವ ಸಂದರ್ಭದಲ್ಲಿ ಕೂಡಾ, ಒಮ್ಮೆ ನಾನು ಕಣ್ಣುಗಳನ್ನು ಮುಚ್ಚಿದಾಗ ನಿಮ್ಮ ತಲೆಯ ಹಿಂದೆ ಎರಡು ಹೊಳೆಯುತ್ತಿದ್ದ ನಕ್ಷತ್ರಗಳನ್ನು ನೋಡಿದೆ. ಒಂದು ಗಾತ್ರದಲ್ಲಿ ದೊಡ್ಡದಾಗಿತ್ತು ಮತ್ತು ಅತ್ಯಂತ ಪ್ರಕಾಶಮಾನವಾಗಿತ್ತು. ನೀವು ಕುಳಿತಿದ್ದಾಗ ನಿಮ್ಮ ಎದುರಿನಲ್ಲಿ ಒಂದು ಬೆಳಕಿನ ಪರದೆ ರಕ್ಷಾಕವಚದಂತೆ ಇತ್ತು.

—ಅಂಜಲಿ ಪಾಟೀಲ್

ನೀವು ಸಾವಿರಾರು ಜನರ ಕುಟುಂಬವನ್ನು ನಿರ್ವಹಿಸುತ್ತಿದ್ದೀರಿ. ಅದರೂ ನಮ್ಮೆಲ್ಲರ ಕಷ್ಟಸುಖಗಳನ್ನು ಕೇಳಲು ನಿಮಗೆ ಸಮಯವಿದೆ. ತಪೋನಗರಕ್ಕೆ ಬರುವ ಮೊದಲು, ಜನರು ಕುಟುಂಬಗಳಿಲ್ಲದೆ ಹೇಗಿರಬಲ್ಲರು ಎಂದು ಆಶ್ಚರ್ಯಪಡುತ್ತಿದ್ದೆ. ಇದಕ್ಕೆ ನಾನು ಇಲ್ಲಿಗೆ ಬಂದು ನೆಲೆಸಿದ ಮೊದಲ ದಿನವೇ ಉತ್ತರ ಕಂಡುಕೊಂಡೆ. ಆ ದಿನ ನನ್ನ ಸಂಬಂಧಿಕರಾರೂ ನಮ್ಮೊಡನೆ ಬಂದಿರಲಿಲ್ಲ. ಹೀಗಾಗಿ ನಾವು ಮಾನಸಿಕವಾಗಿ ವಿಚಲಿತರಾಗಿದ್ದೆವು.

ನಾವು ತಪೋನಗರವನ್ನು ಪ್ರವೇಶಿಸುತ್ತಿದ್ದಂತೆ ಕಾರ್ತಿಕ್ ನಮ್ಮ ಬಳಿಗೆ ಬಂದು 'ತಪೋನಗರಕ್ಕೆ ಸ್ವಾಗತ' ಎಂದರು ನಗುಮೊಗದಿಂದ ನಮ್ಮನ್ನು ಸ್ವಾಗತಿಸಿದರು. ಸೀಮಾ ನಮಗೆ ಟೀ ತಯಾರಿಸಿಕೊಟ್ಟರು. ಸೀಮಾ ಮತ್ತು ಕಾರ್ತಿಕ್ ಇಬ್ಬರೂ ಬಂದು ನಮಗೆ ಮನೆ ಅಣಿ ಮಾಡುವುದರಲ್ಲಿ ಸಹಾಯ ಮಾಡಿದರು. ಆ ದಿನ ನನಗೆ ಷರತ್ತಿಲ್ಲದ ಪ್ರೇಮ ಎಂತಹುದೆಂಬುದು ಮನದಟ್ಟಾಯಿತು. ಇಂಥ ಪ್ರೀತಿ ತುಂಬಿರುವ ಕುಟುಂಬದಿಂದ ನಾನು ಎಂದೂ ದೂರ ವಾಗುವುದಿಲ್ಲ.

—ಪಾರ್ವತಿ

ನಾನು ನಿಮ್ಮ ಪುಸ್ತಕಗಳನ್ನು ಮತ್ತೆ ಮತ್ತೆ ಓದಿದಮೇಲೆ, ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸಿದೆ. ಏಕೆಂದರೆ ನಿಮ್ಮ ಪುಸ್ತಕಗಳನ್ನು ಓದುತ್ತಿದ್ದಂತೆ ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ ಮತ್ತು ಎಲ್ಲವನ್ನೂ ಅರ್ಥಮಾಡಿಕೊಳ್ಳಲು ಸಹಾಯವಾಗಿದೆ. ನೀವು ವಿವರಿಸುವ ರೀತಿ ಬಹಳ ಸರಳ. ನಾನು ಇತರರೊಡನೆ ಸಂಭಾಷಿಸುವಾಗ ನಾನು ಕೂಡ ನಿಮ್ಮ ರೀತಿಯನ್ನೇ ಅನುಸರಿಸುತ್ತೇನೆ. ನಮಗೆ ದೊರೆಯುವ ಅನೇಕ ಪ್ರಯೋಜನಗಳಲ್ಲಿ, ಇದೂ ಒಂದು.

—ರೋಲ್ಯಾಂಡ್ ಫೆಫಿಂಗರ್

ನಾನು ಧ್ಯಾನ ಮಾಡುವ ಸಂದರ್ಭದಲ್ಲಿ ಮೂಲಾಧಾರ ಚಕ್ರದಲ್ಲಿ, ಒತ್ತಡ ಬಿದ್ದಂತೆ ಅನಿಸುತ್ತದೆ. ನನ್ನ ಶರೀರಲ್ಲಿ ಕೂಡಾ ಕಂಪನಗಳು ಉಂಟಾಗುತ್ತವೆ. ಕೆಲವು ಸಲ ನಾನು ಪ್ರಜ್ಞೆಯನ್ನು ಕಳೆದುಕೊಳ್ಳುತ್ತೇನೆ ಮತ್ತು ನನ್ನ ಹುಬ್ಬುಗಳ ನಡುವೆ ಬೆಳಕು ಕಾಣಿಸುಕೊಳ್ಳುತ್ತದೆ. —ಸಂತೋಷ್ ಕೋರೆ

## ವಿವೇಕದ ನುಡಿಗಳು

**ಸಂಗ್ರಹ: ಸೀಮಾ ಅಲ್‌ಮೇಲ್; ಅನು: ಭಾಗ್ಯವತಿ**

ನಮ್ಮ ಆಂತರಿಕ ಬೆಳವಣಿಗೆಗಿರುವ ಅತ್ಯಂತ ದೊಡ್ಡ ಅಡಚಣೆ, ನಮ್ಮ ಅತಿಯಾದ ಅಹಂಕಾರ.

—ಅಮರ

ನಾವು ಉನ್ನತ ಕಂಪನಗಳಿಗೆ ಶ್ರುತಿಗೊಂಡಾಗ, ಜೀವನವನ್ನು ದೇವರು ನೋಡುವಂತೆ ನೋಡುತ್ತೇವೆ. —ಗುರೂಜಿ

ದೇವರು ಮಾನವನ ಬಗ್ಗೆ ಏನೇ ಕನಸು ಕಾಣಬಹುದು; ಮಾನವ ಸಹಕರಿಸದ ಹೊರತು, ದೇವರ ಕನಸು ನನಸಾಗದು. —ಸ್ವೆಲ್ಲ ಚೆರಿಲ್ ಮನ್

ಯಾವಾಗಲೂ ಅವಶ್ಯಕತೆಗಿಂತ ಸ್ವಲ್ಪ ಹೆಚ್ಚು ದಯೆಯುಳ್ಳವರಾಗಿರಿ. —ಜೇಮ್ಸ್ ಬ್ಯಾರಿ

ಪಡಬಾರದ ಕಷ್ಟ ಬಂದರೂ ಸಹ, ಮುನ್ನಡೆಯುತ್ತಲೇ ಇರಿ. —ವಿನ್‌ಸ್ಟನ್ ಚರ್ಚಿಲ್

ಇತರರ ಎಲ್ಲ ತಪ್ಪುಗಳನ್ನೂ ಕ್ಷಮಿಸು; ನಿನ್ನ ಯಾವ ತಪ್ಪನ್ನೂ ಕ್ಷಮಿಸದಿರು. —ಆಸೋನಿಯಸ್

ನಿನಗೆ ಬೇಕಾದ್ದು ಸಿಗದಿದ್ದಾಗ, ಅದು ಸಿಗುವುದೇ ಒಂದು ಅನುಭವ. —ಅನಾಮಧೇಯ

ನೀನು ಏನನ್ನಾದರೂ ಯೋಚಿಸು, ಅದರ ಬಗ್ಗೆ ದೃಢವಾಗಿರು; ನಿನಗೆ ಏನೇ ಬಯಕೆ ಇರಲಿ, ಅದರ ಬಗ್ಗೆ ಖಚಿತವಾಗಿರು; ನೀನು ಏನನ್ನಾದರೂ ಅನುಭವಿಸು, ಎಂದಿನಂತಿರು. —ಈಲಿಯಟ್

ನೀರು ಮತ್ತು ಕಲ್ಲು ಮುಖಾಮುಖಿಯಾದಾಗ, ನೀರಿಗೇ ಗೆಲುವು – ಬಲದ ಮೂಲಕವಲ್ಲ. ನಿರಂತರ ಹರಿಯುವಿಕೆಯಿಂದ. —ಬುದ್ಧ

ಎಲ್ಲ ಸತ್ಯ ಮೂರು ಹಂತಗಳ ಮೂಲಕ ಹಾದುಹೋಗುತ್ತದೆ – ಅಪಹಾಸ್ಯ, ವಿರೋಧ ಮತ್ತು ಒಪ್ಪಿಗೆ. —ಆರ್ಥರ್ ಸ್ಕೋಪೆನ್‌ಹೋವರ್

ಯಾವುದಕ್ಕೆ ಭಯಪಡುತ್ತೀಯೋ ಅದನ್ನು ಮಾಡುವುದು ಧೈರ್ಯ; ಭಯವಿಲ್ಲದೇ ಧೈರ್ಯವಿಲ್ಲ. —ಎಡೀ ರಿಕೆನ್‌ಬಾಖರ್

ಒಬ್ಬ ವ್ಯಕ್ತಿಯ ಕನಸುಗಳು ಅವನ ಹಿರಿಮೆಯ ಸೂಚಕ. —ಜ್ಹಾಡೋಕ್ ರೇಬಿನ್‌ವಿಜ್

ಭರವಸೆ ಕಣ್ಣಿಗೆ ಕಾಣದೆ ಇರುವುದನ್ನು ನೋಡುವುದು; ಸ್ಪರ್ಶಿಸಲಾರದೆ ಇರುವುದನ್ನು ಅನುಭವಿಸುವುದು; ಮತ್ತು ಅಸಾಧ್ಯವಾದದ್ದನ್ನು ಸಾಧಿಸುವುದು. —ಅಪರಿಚಿತ ಲೇಖಕ

ತನ್ನಲ್ಲಿ ಇರುವಷ್ಟರಲ್ಲಿ ಬದುಕುವುದನ್ನು ತಿಳಿಯದವನು ಯಾವಾಗಲೂ ಗುಲಾಮನೇ.

—ಹೊರೇಸ್

ಭೂಮಿ ಹೂವುಗಳಲ್ಲಿ ತನ್ನ ನಗುವನ್ನು ತೋರಿಸುತ್ತದೆ. —ಎಮರ್ಸನ್

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)**

**ಪ್ರ: ನಾವು ಋಷಿಗಳನ್ನು ಹೇಗೆ ಸಂಪರ್ಕಿಸಬಹುದು?**

ಉ: ನಮ್ಮ ಅಂತರಾತ್ಮ ಅಥವಾ ಉನ್ನತ ಆತ್ಮದೊಂದಿಗೆ ಸಂಪರ್ಕ ಕಲ್ಪಿಸುವುದರಿಂದ.

**ಪ್ರ ನಾವು ಈ ಸಂಪರ್ಕವನ್ನು ಹೇಗೆ ಮಾಡಬಹುದು?**

ಉ: ಅದಕ್ಕೆ ತುಂಬಾ ದಾರಿಗಳಿವೆ ಮತ್ತು ಅತಿ ಸುಲಭವಾದ ದಾರಿಯೆಂದರೆ ಪ್ರೀತಿಯಿಂದ ಸಂಪರ್ಕ, ಶರಣಾಗತಿಯಿಂದ ಸಂಪರ್ಕಿಸುವುದು.

**ಪ್ರ: ಒಬ್ಬ ಗುರು ತನ್ನ ಅನುಯಾಯಿಯ ದೇಹ ಪ್ರವೇಶ ಮಾಡಿ ಆತ ಅಥವಾ ಆಕೆ ಕೆಲವು ಅಭ್ಯಾಸಗಳನ್ನು ಮಾಡುವಂತೆ ಪ್ರೇರೇಪಿಸಬಹುದೇ?**

ಉ: ಇದು ಸಾಧ್ಯ. ಆದರೆ ನಿಜವಾದ ಗುರು ಇದನ್ನು ಎಂದೆಂದೂ ಮಾಡುವುದಿಲ್ಲ.

**ಪ್ರ: ದೀಕ್ಷೆಯ ನಂತರ ಕೆಲ ಜನರು ಕುಣಿದಾಡುವುದನ್ನು ನಾನು ಕಂಡಿದ್ದೇನೆ. ಯಾಕೆ?**

ಉ: ದೀಕ್ಷೆಯ ನಂತರ ಕೆಲವರು ಭಾವೋನ್ಮಾದದ ಸ್ಥಿತಿಗೆ ಒಳಗಾಗುತ್ತಾರೆ. ಅದು ಸ್ವಯಂ ಪ್ರೇರಿತ. ಅದಕ್ಕೂ ದೀಕ್ಷೆಗೂ ಯಾವ ಸಂಬಂಧವಿಲ್ಲ.

**ಪ್ರ: ನಾವು ಭೇಟಿಯಾಗುವ ಜನರ ಆತ್ಮಗಳ ಮೂಲವನ್ನು ತಿಳಿಯಬಹುದೇ? ಅದು ಪರಬ್ರಹ್ಮ ಲೋಕವೇ ಅಥವಾ ಬೇರೆ ಲೋಕಗಳೇ?**

ಉ: ಅದು ಕಷ್ಟ ಆದರೆ ಸಾಧ್ಯ. ಕೆಲವು ವಿಷಯಗಳನ್ನು ತಿಳಿಯದಿರುವುದು ಒಳ್ಳೆಯದು. ಎಲ್ಲಾ ಆತ್ಮಗಳು ದೇವರಿಂದ ಬರುತ್ತವೆ. ಈ ಜ್ಞಾನ ನಾವು ಇತರರೊಂದಿಗೆ ಶಾಂತಿ ಮತ್ತು ಮಮತೆಯಿಂದ ಬದುಕಲು ಸಹಾಯವಾಗುತ್ತದೆ.

**ಪ್ರ: ಆಧ್ಯಾತ್ಮಿಕವೆಂದರೇನು?**

ಉ: ಆಧ್ಯಾತ್ಮಿಕವಾಗಿ ಇರುವುದೆಂದರೆ ಒಳ್ಳೆಯವನಾಗಿರುವುದು, ಸರಳವಾಗಿರುವುದು ಮತ್ತು ಸೋಗಿಲ್ಲದಿರುವುದು. ಆಧ್ಯಾತ್ಮಿಕವಾಗಿರುವುದೆಂದರೆ ಸಹಜ ಮತ್ತು ಸಂವೇದನಾಶೀಲ ಮನುಷ್ಯನಾಗಿರುವುದು. ಆಧ್ಯಾತ್ಮಿಕವಾಗಿರುವುದೆಂದರೆ ಸಹನೆಯನ್ನು ಹೊಂದಿರುವುದು, ಜನರ ಮಾತುಗಳನ್ನು ಆಲಿಸುವುದು, ಪಕ್ಷಿಗಳ ಕಲರವವನ್ನು ಆಲಿಸುವುದು ಮತ್ತು ಆಕಾಶವನ್ನು ಕಿವಿಗೊಟ್ಟು ಕೇಳುವುದು. ಆಧ್ಯಾತ್ಮಿಕವಾಗಿರುವುದೆಂದರೆ ವಿಶ್ವವನ್ನು ಆಲಿಸಲು ಪ್ರಯತ್ನಿಸುವುದು, ಈ ವಿಶ್ವದಲ್ಲಿರುವ ಮತ್ತು ಮಾನವರಲ್ಲಿರುವ ಒಳ್ಳೆಯತನವನ್ನು ಅನುಭವಿಸಲು ಪ್ರಯತ್ನಿಸುವುದು.

**ಪ್ರ: ನೀವು ಆಧ್ಯಾತ್ಮಿಕ ಮಾರ್ಗವನ್ನು ಹೇಗೆ ನಿರೂಪಿಸುವಿರಿ?**

ಉ: ಆಧ್ಯಾತ್ಮಿಕ ಮಾರ್ಗಕ್ಕೆ ಒಂದು ಮೌಲ್ಯಾಧಾರಿತ ವ್ಯವಸ್ಥೆ ಮತ್ತು ಸ್ಪಷ್ಟ ಮಾರ್ಗದರ್ಶನವಿರುತ್ತದೆ. ಅದು ವ್ಯಕ್ತಿಗಳಿಗೆ ಸಹಾಯ ಮಾಡುತ್ತದೆ ಮತ್ತು ಇಡೀ ಪ್ರಪಂಚಕ್ಕೆ ಸೇವೆ ಸಲ್ಲಿಸುತ್ತದೆ.

**ಪ್ರ: ಕ್ರಿಯಾತ್ಮಕ ಮಾನಸಿಕ ಚಿತ್ರೀಕರಣದಲ್ಲಿ (creative visualisation) ಮನಸ್ಸು ಮತ್ತು ಬುದ್ಧಿಯ ಪಾತ್ರವೇನು?**

ಉ: ಬುದ್ಧಿ ಕಲ್ಪನೆಯನ್ನು ಒದಗಿಸುತ್ತದೆ. ಮನಸ್ಸು ವಿಷಯವನ್ನು ಒದಗಿಸುತ್ತದೆ.

**ಪ್ರ: ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಯಾವ ಯಾವ ಸಾಮರ್ಥ್ಯಗಳಿವೆ?**

ಉ: ಅರಿವು: ಅರಿವು ಆತ್ಮದ ಅತ್ಯಂತ ಮುಖ್ಯವಾದ ಸಾಮರ್ಥ್ಯ. ಇದು ನಮ್ಮನ್ನು ಇತರ ಸ್ತರಗಳಲ್ಲಿರುವ ಜನರೊಂದಿಗೆ ಸಂಪರ್ಕ ಏರ್ಪಡಿಸುತ್ತದೆ. ಅರಿವು, ನಮಗೆ ಎಲ್ಲ ರೀತಿಯ ಜ್ಞಾನ ಮತ್ತು ಅನುಭವಗಳನ್ನು ತರುತ್ತದೆ.

ಅಂತರ್ ಗ್ರಹಿಕೆ: ಈ ಸಾಮರ್ಥ್ಯ, ಮನಸ್ಸು ಮತ್ತು ಬುದ್ಧಿಗಳ ಸಹಾಯವಿಲ್ಲದೇ ನೇರವಾಗಿ ವಿಷಯಗಳನ್ನು ಗ್ರಹಿಸಲು ಅಥವಾ ಅರಿಯಲು ಸಹಾಯ ಮಾಡುತ್ತದೆ.

ಪ್ರಜ್ಞೆ: ಇದು ಆತ್ಮದ ಧ್ವನಿ; ಆತ್ಮದ ವಿವೇಕ. ಪ್ರಜ್ಞೆ ಯಾವಾಗಲೂ ಸರಿಯಾದ ಆಯ್ಕೆಗಳನ್ನು ಮಾಡಲು ಸಹಾಯ ಮಾಡುತ್ತದೆ.

ಬುದ್ಧಿ ಆಲೋಚಿಸುತ್ತದೆ. ಮನಸ್ಸು ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ದೈಹಿಕ ಶರೀರಕ್ಕೂ ಸಹ ತನ್ನದೇ ಆದ ಸ್ವಂತ ಬುದ್ಧಿ ಮತ್ತು ವಿವೇಕಗಳಿವೆ.


ಅಹಂ: ಇದು, ಶರೀರ, ಮನಸ್ಸು ಮತ್ತು ಬುದ್ಧಿಗಳ ಕ್ರೋಢೀಕೃತ ಬುದ್ಧಿಶಕ್ತಿ.

ನಮ್ಮೊಳಗೆ ಛಾಯಾ ಪುರುಷ ಇದ್ದಾನೆ. ನಮಗೆ ಸೂಕ್ಷ್ಮ ಶರೀರವಿದೆ, ಮೂರನೇ ಕಣ್ಣಿದೆ. ನಾವು ಮೂರನೇ ಕಣ್ಣನ್ನು ಚೇತನಗೊಳಿಸಿದಾಗ, ಸೂಕ್ಷ್ಮ ಲೋಕಗಳಲ್ಲಿರುವ ವಸ್ತುಗಳನ್ನು ಮತ್ತು ಅಲ್ಲಿರುವ ಸೂಕ್ಷ್ಮ ಶರೀರಿಗಳನ್ನು ನೋಡಬಹುದು. ❑

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 120/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| - ಧ್ಯಾನ ಮಾಡುವುದು ಹೇಗೆ | |
| - ಧ್ಯಾನ ಯೋಗ | |
| - ಆತ್ಮದ ಅವರೋಹಣ | |
| - ಶಂಬಲ ನಿಯಮಗಳ ಅಭ್ಯಾಸ | |
| - ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಅನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் எசய்வது எப்படி | 50/- |
| ஒளியின் வாயில்கள் | 200/- |
| ஒளியில் வாழ்க்கை | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூக்ஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)**

2009 ಏಪ್ರಿಲ್ 7 ರಂದು ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ನನ್ನ ತಮ್ಮ ಗುರೂಜಿಯವರ ಸುತ್ತ ಪ್ರಬಲವಾದ ಚೈತನ್ಯದ ವಲಯವನ್ನು ನೋಡಿದನು. ಎಲ್ಲರಂತೆ ಅವನೂ ಗುರೂಜಿಯವರನ್ನು ನೋಡಿದಾಕ್ಷಣ ಪ್ರೀತ್ಯಾದರಗಳು ಅವನಲ್ಲಿ ಉಂಟಾದುವೆಂದು ಅವನು ಹೇಳಿದನು. ಗುರೂಜಿಯವರ ಆಶೀರ್ವಾದ ಪಡೆಯಲು ಸಾಲಿನಲ್ಲಿ ನಿಂತಿದ್ದಾಗ ಕಿಟಕಿಯಿಂದ ಹೊರಗಿನ ಮರಗಳೂ ಕೂಡ ಅಂತಹ ಕಡು ಬೇಸಿಗೆಯಲ್ಲೂ ತಮ್ಮ ಎಲೆಗಳನ್ನು ಅಲ್ಲಾಡಿಸುತ್ತಾ ಗುರೂಜಿಯವರಿಗೆ ತಮ್ಮ ಪ್ರೀತಿ ಗೌರವಗಳನ್ನು ತೋರಿಸುತ್ತಿರುವುದನ್ನು ಗಮನಿಸಿದನು. ಬಹುಶಃ ಆ ಚೇತನಯುಕ್ತ ಮರಗಳು ಇಡೀಮುಂಬೈ ನಗರವನ್ನೇ ಪ್ರತಿನಿಧಿಸಿ ತಮ್ಮ ಗೌರವ ತೋರಿಸಿದಂತಿತ್ತು.

7 ನಿಮಿಷಗಳ ಚಾನಲಿಂಗ್ ಸಮಯದಲ್ಲಿ ಅನೇಕರಿಗೆ ಬೆಳಕು ಕಾಣಿಸಿತು. ಕೆಲವರಿಗೆ ಬೇರೆ ಬೇರೆ ಬಣ್ಣಗಳು ಕಾಣಿಸಿದವು. ಎಲ್ಲರೂ ತಪೋನಗರದ ಪ್ರಶಾಂತತೆ ಹಾಗೂ ಪ್ರೀತಿಯನ್ನು ಅನುಭವಿಸಿದರು. ನಾನು, ಗುರೂಜಿಯವರಿಂದ ಮೂರು ಬಾರಿ ಪ್ರಖರವಾದ ಬೆಳಕು ಹಾಗೂ ಚೈತನ್ಯ ಹೊರ ಹೊಮ್ಮಿದ್ದನ್ನು ಕಂಡೆ.

—ಪೂರ್ಣಿಮಾ ಪರುಲೇಕರ್

ಒಂದು ದಿನ ನಾನು ಸೂಕ್ಷ್ಮ ಶರೀರಿಯಾಗಿ ತಪೋನಗರಕ್ಕೆ ಬಂದಿದ್ದೆ. ಬೆಳಕಿನಿಂದ ಕಂಗೊಳಿಸುತ್ತಿದ್ದ ನನ್ನ ದೇಹವನ್ನು ನಾನೇ ಕಂಡೆ. ತಪೋನಗರದ ಮುಖ್ಯ ಕಟ್ಟಡವನ್ನು ಪ್ರವೇಶಿಸಿದೆ. ಅದು ಇಟ್ಟಿಗೆ ಹಾಗೂ ಸಿಮೆಂಟಿನ ಕಟ್ಟಡದಂತೆ ಕಂಡುಬರಲಿಲ್ಲ. ಒಂದು ಬೆಳಕಿನ ಅರಮನೆಯಂತೆ ಕಂಗೊಳಿಸುತ್ತಿತ್ತು. ಧ್ಯಾನದ ಕೊಠಡಿಗೆ ಮೆಟ್ಟಿಲುಗಳನ್ನು ಹತ್ತಿಹೋದಾಗ ಅಲ್ಲಿ ಅನೇಕರು ತಮ್ಮ ಬೆಳಕಿನ ಶರೀರದಿಂದ ಇದ್ದದ್ದನ್ನು ಕಂಡೆ. ಅವರೆಲ್ಲರೂ ಅಲ್ಲಿ ಸಂಚರಿಸುತ್ತಿದ್ದರು.

ಅವರೊಂದಿಗೆ ನಮ್ಮ ಗುರೂಜಿ ಸಹ ಇದ್ದರು. ಅಲ್ಲಿ ದಿವ್ಯವಾದ ಕಾಂತಿ ತುಂಬಿತ್ತು. ಗುರೂಜಿಯವರು ಎಲ್ಲರೊಡನೆ ಸಂಭಾಷಿಸುತ್ತಿದ್ದರು. ಅಲ್ಲಿ ಯಾರೂ ಕುಳಿತಿರಲಿಲ್ಲ. ನಿಂತೋ ಅಥವ ಚಲಿಸುತ್ತಲೋ ಅಥವಾ ತೇಲುತ್ತಲೋ ಇದ್ದರು.

—ವಿದ್ಯಾ ಆರೋರ

ಮಾರ್ಚ್ ತಿಂಗಳ ಮೊದಲಲ್ಲಿ ಒಂದು ದಿನ ಧ್ಯಾನ ಮಾಡುತ್ತಿದ್ದಾಗಿನ ಅನುಭವವಿದು. ನನ್ನನ್ನು ನನ್ನ ಈ ಭೌತಿಕ ಶರೀರದಿಂದ ಹೊರತೆಗೆದು ಸೂಕ್ಷ್ಮ ಶರೀರದಲ್ಲಿ ಮತ್ತೊಂದು ಲೋಕಕ್ಕೆ ಕರೆದುಕೊಂಡುಹೋಗಿ, ನನ್ನ ಕೈಗೆ ಹೊಂಬಣ್ಣದ ಉರಿಯುತ್ತಿರುವ ಚೆಂಡನ್ನು ಕೊಟ್ಟು ಅದರಿಂದ ನಮ್ಮ ಭೂಮಿಗೆ ಜೋರಾಗಿ ಹೊಡೆಯಲು ತಿಳಿಸಿದರು. ಆ ಚೆಂಡುಗಳೆಲ್ಲ ಅತ್ಯಂತ ಭಾರವಾಗಿದ್ದವು. ನಾನು ಅವುಗಳಿಂದ ಭೂಮಿಗೆ ಹೊಡೆದಾಗ, ಭೂಮಿ ಸೀಳಿ ಅದರಿಂದ ಬೂದು ಬಣ್ಣದ ಹೊಗೆ ಹೊರ ಬಂದಿತು. ನನಗೆ ಬಹಳ ಹೆದರಿಕೆಯಾಯಿತು. ಧ್ಯಾನ ಮುಗಿದ ನಂತರ ನನಗೆ ಅತ್ಯಂತ ದಣಿವಾಗಿತ್ತು. ಮರುದಿನ ಏನಾಗುವುದು ಎಂಬುದನ್ನು ಗಮನಿಸುವ ನಿರ್ಧಾರಮಾಡಿದೆ. ಆದರೆ ಇದು ನನ್ನ ಮನಸ್ಸಿನ ಆಟವಿರಬಹುದು ಎನಿಸಿತು.

ಮಾರನೆಯ ದಿನ ನಾನು ಆ ಚೆಂಡುಗಳನ್ನು ಎಸೆಯುತ್ತಿದ್ದಾಗ ಋಷಿಗಳು ಸಂತೋಷದಿಂದ ಕೈ ತಟ್ಟಿ ನಗುತ್ತಿದ್ದುದನ್ನು ಕಂಡೆ. ಅವರು ನನಗೆ "ಏನೂ ಯೋಚಿಸಬೇಡ. ಈ ವಿಧಾನದಿಂದ ನಮ್ಮ ಭೂಮಿಯಿಂದ ಆ ಬೂದು ಹೊಗೆಯನ್ನು ತೆಗೆಯಲಾಗುತ್ತದೆ" ಎಂದು ತಿಳಿಸಿದರು. ಆಗಿನಿಂದ ಅವರು ನನಗೆ ಹೇಳಿದಾಗಲೆಲ್ಲಾ ನಿರ್ಭಯವಾಗಿ ಆ ಕೆಲಸವನ್ನು ಮಾಡುತ್ತಿದ್ದೇನೆ.

ಫೆಬ್ರವರಿ 26 ರಂದೆ ಸಂಜೆ 7.30 ರಲ್ಲಿ ಬೆಳಕನ್ನು ಚಾನಲ್ ಮಾಡಲು ನಾವೆಲ್ಲರೂ ಮುಂಬೈನಿಂದ ಗುರೂಜಿಯವರೊಡನೆ ಮಾನಸಿಕ ಸಂಪರ್ಕ ಕಲ್ಪಿಸಿಕೊಂಡು 7 ನಿಮಿಷಗಳು ಚಾನಲ್ ಮಾಡಿದೆವು. ಸಂಪರ್ಕ ಹೊಂದಿದೊಡನೆಯೇ ಸಕಾರಾತ್ಮಕ ಚೈತನ್ಯದ ಹರಿವಿನ ಅನುಭವವಾಯಿತು. ನನಗೆ ಬೆಳಕನ್ನು ನೀರಿನ ಮೇಲೆ ಮತ್ತು 'ಕ್ವಾರ್ಕ್' ಮೇಲೆ ಕೇಂದ್ರೀಕರಿಸಲು ಸೂಚಿಸಲಾಯಿತು. ಮುಂದಿನ ಅಪಾಯ ಜಲಮಾರ್ಗವಾಗಿ ಮತ್ತು 'ಕ್ವಾರ್ಕ್'ಗೆ ಬರುವುದಾಗಿಯೂ ಹೇಳಿದರು. ಅದು ಒಂದು ಅಪರೂಪದ ಪಕ್ಷಿ ಇರಬೇಕೆಂದುಕೊಂಡೆ. ಆದರೆ ಅದನ್ನು ನೋಡಿದಾಗ ಅದೊಂದು ನಿಸರ್ಗದಲ್ಲೇ ಕಂಡುಬರುವ ಒಂದು ಅತ್ಯಂತ ಸೂಕ್ಷ್ಮ ಕಣ!

—ಝರೀನ ಆಂಟಿಯ

ಫೆಬ್ರವರಿ 26 ರಂದು ಕೋರಮಂಗಲದ ಒಳಾಂಗಣ ಸ್ಟೇಡಿಯಂನಲ್ಲಿ ಬೆಳಕನ್ನು ಚಾನೆಲ್ ಮಡುವ ಆ ಮಹಾನ್ ಸಂದರ್ಭದಲ್ಲಿ ನನಗೆ ಮೊದಲನೆಯ ಸಲ ಬೆಳಕಿನ ಅನುಭವವಾಯಿತು. ಆ ಬೆಳಕು ನನ್ನಲ್ಲೇ ಅನೇಕ ಟ್ಯೂಬ್‌ಲೈಟ್‌ಗಳು ಹತ್ತಿಕೊಂಡಷ್ಟು ಪ್ರಖರತೆಯಿಂದ ಕೂಡಿತ್ತು. ಇಡೀವಿಶ್ವವೇ ನನ್ನ ಉದರದಲ್ಲಿ ಇದ್ದಂತಿತ್ತು. ಆ 7 ನಿಮಿಷಗಳು 7 ಸೆಕೆಂಡುಗಳಷ್ಟು ವೇಗವಾಗಿ ಕಳೆದಂತೆ ಭಾಸವಾಯಿತು. ಆ ನನ್ನ ಅನುಭವವನ್ನು ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ.

—ಕವಿತ ಕಾನಡೆ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ